ಹೇಳಿರಬಹುದೆಂದುಕೊಂಡೆ. ನಾನು ಕೆಳಗೆ ಬಿದ್ದಿದ್ದ ಪುಸ್ತಕವನ್ನು ಎತ್ತಿಕೊಂಡೆ. ಕುತೂಹಲದಿಂದ ಪುಟ ತಿರುವಿದೆ. ಪೈರೆಟ್ ಹೇಳಿದ ವಾಕ್ಯದ ತಲೆಬುಡ ಅರ್ಥವಾಗಲಿಲ್ಲ.

ಮರುದಿನ ಬೆಳಗ್ಗೆ ನಮಗೆ ಯಾವುದೇ ಸಮಾಚಾರ ತಿಳಿಯಲಿಲ್ಲ. ಅದು ನನ್ನ ಗೆಳೆಯನನ್ನು ವಿಚಲಿತನನ್ನಾಗಿಸಲಿಲ್ಲ. ಆದರೆ ಉಪಹಾರದ ಸಮಯದಲ್ಲಿ ಅವನು ಹಾರ್ಡ್‌ಮನ್‌ರನ್ನು ಕರೆಯುವಂತೆ ಸೂಚಿಸಿದ.

ನಾವು ಹಾರ್ಡ್‌ಮನ್‌ರನ್ನು ಮನೆಯಲ್ಲಿ ಭೇಟಿಯಾದಾಗ ಹಿಂದಿನ ದಿನಕ್ಕಿಂತಲೂ ಬಹಳ ಶಾಂತವಾಗಿರುವಂತೆ ಕಂಡಿತು.

"ಒಳ್ಳೆಯದು ಪೈರೆಟ್, ಏನಾದರೂ ಸುದ್ದಿ ಇದೆಯೇ?" ಅವರು ಕುತೂಹಲದಿಂದ ಕೇಳಿದರು.

ಪೈರೆಟ್ ಒಂದು ಕಾಗದದ ಚೂರನ್ನು ಅವರಿಗೆ ಕೊಟ್ಟ.

"ಅದರಲ್ಲಿ ಬರೆದಿರುವ ಹೆಸರಿನ ವ್ಯಕ್ತಿಯೇ ಆಭರಣಗಳನ್ನು ಕದ್ದಿದ್ದಾನೆ. ನಾನು ಈ ಸಂಗತಿಯನ್ನು ಪೊಲೀಸರಿಗೆ ತಿಳಿಸಲೇ? ಅಥವಾ ನೀವು ಪೊಲೀಸರನ್ನು ಕರೆಯದೆ ಆ ಆಭರಣಗಳನ್ನು ಹಿಂಪಡೆಯಲು ನನಗೇ ಸೂಚಿಸುವಿರಾ?"

ಹಾರ್ಡ್‌ಮನ್ ಕಾಗದದ ತುಂಡನ್ನೇ ದಿಟ್ಟಿಸಿದರು. ಕೊನೆಗೆ ತಮ್ಮ ಧ್ವನಿಯನ್ನು ಹೊರಡಿಸಿದರು.

"ತುಂಬಾ ಆಶ್ಚರ್ಯವಾಗ್ತಿದೆ. ಈ ವಿಷಯದಲ್ಲಿ ಯಾವುದೇ ಹಗರಣ ಆಗಬಾರದೆಂದುಕೊಂಡಿದ್ದೆ. ಮಿಸ್ಟರ್ ಪೈರೆಟ್, ಈ ಸಮಸ್ಯೆಯನ್ನು ನೀವೇ ಬಗೆಹರಿಸಿ. ನೀವೇ ಅದನ್ನು ಬಿಡಿಸ್ತೀರಿ ಅನ್ನೋ ನಂಬಿಕೆಯಿದೆ."

ನಮ್ಮ ಮುಂದಿನ ಪ್ರಯಾಣ ಟ್ಯಾಕ್ಸಿಯಲ್ಲಿ. ಪೈರೆಟ್ ಕಾಲ್‌ಟನ್‌ಗೆ ಓಡಿಸಲು ಹೇಳಿದ. ಅಲ್ಲಿ ಕೌಂಟೆಸ್ ವೇರ ರೊಸ್ಸಕಾಫ್‌ಳನ್ನು ವಿಚಾರಣೆ ನಡೆಸುವುದಿತ್ತು. ಕೆಲವೇ ನಿಮಿಷಗಳಲ್ಲಿ ನಾವು ಅವಳಿರುವ ಸ್ಥಳವನ್ನು ತಲುಪಿದೆವು.

"ಮಿಸ್ಟರ್ ಪೈರೆಟ್, ನೀನು ಆ ಕೆಲಸ ಮಾಡಿದೆಯಾ? ಆ ಬಡ ಹುಡುಗನನ್ನು ಬಿಟ್ಟೆ ತಾನೆ?"

"ಮೇಡಂ ಕೌಂಟೆಸ್‌ರವರೆ, ನಿಮ್ಮ ತರುಣ ಸ್ನೇಹಿತ ಪಾರ್ಕರ್ ಸುರಕ್ಷಿತವಾಗಿದ್ದಾನೆ."

"ಆಹಾ! ನಿಜವಾಗಿಯೂ ನೀನು ಬುದ್ಧಿವಂತ! ಅದ್ಭುತ! ತಕ್ಷಣ ಕೆಲಸ ಮುಗಿಸಿದೆ."

"ಅಷ್ಟೇ ಅಲ್ಲ. ನಾನು ಹಾರ್ಡ್‌ಮನ್ ಅವರಿಗೆ ಇವತ್ತು ಆಭರಣಗಳು ಹಿಂದಿರುಗುವಂತೆ ಮಾಡುತ್ತೇನೆಂದು ಪ್ರತಿಜ್ಞೆ ಮಾಡಿದ್ದೇನೆ."

"ಅದಕ್ಕೆ?"

"ಅದಕ್ಕೆ ತಾವು ದಯವಿಟ್ಟು ಆಭರಣಗಳನ್ನು ನನ್ನ ಕೈಗೆ ಹಾಕಬೇಕೂಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ನಾನು ನಿಮ್ಮನ್ನು ಅವಸರಿಸುತ್ತಿರುವುದಕ್ಕೆ ಕ್ಷಮೆಯಿರಲಿ. ಹೊರಗೆ ಟ್ಯಾಕ್ಸಿ ನಿಲ್ಲಿಸಿ ಬಂದಿದ್ದೇನೆ. ಅಗತ್ಯ ಬಿದ್ದರೆ ಪೊಲೀಸ್ ಸ್ಟೇಷನ್‌ವರೆಗೂ ಇದನ್ನು ಒಯ್ಯಬೇಕಾದಿತು."

ಕೌಂಟೆಸ್ ಸಿಗರೇಟ್ ಹಚ್ಚಿಕೊಂಡಳು. ಸ್ವಲ್ಪ ಹೊತ್ತು ಬಂಡೆಕಲ್ಲಿನಂತೆ ಕುಳಿತಳು. ಬಳಿಕ ಪೈರೆಟ್‌ನತ್ತ ಸಿಗರೇಟ್‌ನ ಹೊಗೆಯನ್ನು ಸುರುಳಿಯಾಕಾರದಲ್ಲಿ ಊದಿ ಗಹಗಹಿಸಿ ನಗುತ್ತಾ ಎದ್ದು ನಿಂತಳು. ಬರೆಯುವ ಮೇಜಿನತ್ತ ಹೆಜ್ಜೆ ಹಾಕಿ ಅದರ ಡ್ರಾವರ್ ಎಳೆದು ಕಪ್ಪು ಬಣ್ಣದ ರೇಷ್ಮೆಯ ಕೈಚೀಲವನ್ನು ತೆಗೆದಳು. ಅದನ್ನು ಹಗುರವಾಗಿ ಪೈರೆಟ್‌ನತ್ತ ಎಸೆದಳು. ಅವಳ ಮೆತ್ತಗಿನ ದನಿ ನಿಧಾನವಾಗಿ ಹೊರಗೆ ಬಂತು.

"ನಾವು ರಷ್ಯನ್ನರು ದುಂದುವೆಚ್ಚವನ್ನು ಅಭ್ಯಾಸ ಮಾಡಿಕೊಂಡವರು. ಅದಕ್ಕೆ ಹೇರಳ ಹಣ ಬೇಕಾಗುತ್ತಿತ್ತು. ನೀನು ಅದನ್ನು ತೆರೆದು ನೋಡಬೇಕಾಗಿಲ್ಲ. ಎಲ್ಲವೂ ಅದರ ಒಳಗೇ ಇದೆ."

ಪೈರೆಟ್ ಎದ್ದು ನಿಂತ.